ಭಾನುವಾರ ರೋಗಿ ಒಬ್ಬ ವೈದ್ಯರ ಬಳಿ ಹೋದ.
ರೋಗಿ: ಡಾಕ್ಟ್ರೆ, ನಾನು ಮನೇಲಿದ್ರೆ ನನ್ನ ಹೆಂಡ್ತಿ ತುಂಬಾ ಕಿರಿಕಿರಿ ಮಾಡ್ತಾಳೆ. ನೆಮ್ಮದಿನೇ ಇಲ್ಲವಾಗಿದೆ. ಶಾಂತ ಆಗೋಕೆ ಯಾವುದಾದರೂ ಮಾತ್ರ ಇದ್ರೆ ಕೊಡಿ.
ಡಾಕ್ಟರ್: ಆ ಥರ ಮಾತ್ರೆ ಇದ್ದಿದ್ರೆ ನಾನ್ಯಾಕೆ ಭಾನುವಾರನೂ ಆಸ್ಪತ್ರೆ ತೆರೆದು ಕುಂತಿರ್ತಿದ್ದೆ.

ರಾಮು: ಡಾಕ್ಟ್ರೆ, ಹುಳ ತಿಂದದ್ದು ನನ್ನ ಮೇಲಿನ ಹಲ್ಲನ್ನು. ನೀವ್ಯಾಕೆ ನನ್ನ ಕೆಳಗಿನ ಹಲ್ಲು ತೆಗೆದ್ರಿ.
ಡಾಕ್ಟರ್: ಕೆಳಗಿನ ಹಲ್ಲಿನ ಮೇಲೆ ಕುಳಿತು, ಮೇಲಿನ ಹಲ್ಲನ್ನು ಹುಳ ತಿನ್ನುತ್ತೆ. ಅದಕ್ಕೆ ತೆಗ್ದೆ.
ಅಷ್ಟಕ್ಕೂ ಡಾಕ್ಟ್ರು ನೀವಾ ನಾನಾ?

ಗಂಡ: ಪಕ್ಕದ ಮನೆಯಾಕೆ ಹೇಗೆ ಸತ್ತಳು?
ಹೆಂಡತಿ: ದ್ವಿದಳ ಧಾನ್ಯಗಳ ರೇಟು ಜಾಸ್ತಿ ಆಗಿದ್ದಕ್ಕೆ.
ಗಂಡ: ಕಾಮಿಡಿ ಮಾಡಬೇಡ. ಬೇಳೆ ಕಾಳುಗಳ ರೇಟು ಜಾಸ್ತಿಯಾದರೆ ಯಾರಾದರೂ ಸಾಯ್ತಾರಾ?
ಹೆಂಡತಿ: ನಿಜ ರೀ... ನಾನೆ ನನ್ನ ಕಣ್ಣಾರೆ ಡೆತ್ ಸರ್ಟಿಫಿಕೇಟ್ ನೋಡಿದೆ.
ಗಂಡ: ಏನಂತ ಬರೆದಿತ್ತು?
ಹೆಂಡತಿ: ಡೆತ್ ಡ್ಯೂ ಟು ಹೈ ಪಲ್ಸ್ ರೇಟ್!
ಆದನ್ನು ಕೇಳಿ ಕೋಮಾಗೆ ಜಾರಿದ ಗಂಡ ಇನ್ನೂ ಹೊರಬಂದಿಲ್ಲ.

ಟೀಚರ್: ಪಾರ್ವತಿ ದೇವಿ ಏಕೆ ಶಿವನನ್ನೇ ಮೆಚ್ಚಿ ಮದುವೆಯಾದಳು.
ವಿದ್ಯಾರ್ಥಿ: ಶಿವ ದಿಗಂಬರ. ಹಾಗಾಗಿ ಬಟ್ಟೆ ಒಗೆಯೋ ಕೆಲಸವಿಲ್ಲ. ತಲೆ ಮೇಲೆ ಗಂಗೆ ಇರೋದ್ರಿಂದ ನೀರಿನ ಸಮಸ್ಯೆ ಇಲ್ಲ. ಮುಡಿಯಲ್ಲಿ ಚಂದ್ರ ಇರೋದ್ರಿಂದ ಕರೆಂಟ್ ಬಿಲ್ ಕಟ್ಟುವಂತಿಲ್ಲ. ಶಿವನಿಗೆ ತಂದೆ–ತಾಯಿ ಇಲ್ಲದಿರುವುದರಿಂದ ಅತ್ತೆ ಮಾವನ ಕಾಟವೂ ಇಲ್ಲ. ಅದಕ್ಕೆ ಶಿವನನ್ನೇ ಮೆಚ್ಚಿ ಮದುವೆಯಾದಳು.
ಉತ್ತರ ಕೇಳಿದ ಟೀಚರ್ ತಲೆತಿರುಗಿ ಬಿದ್ದರು.

ಮೊಮ್ಮಗ: ತಾತಾ ನೀನು ಮದುವೆ ಆಗ್ತೀಯಾ?
ತಾತಾ: ಈ ವಯಸ್ಸಲ್ಲಿ ನನಗೆ ಯಾರು ಹೆಣ್ಣು ಕೊಡ್ತಾರೆ ಮಗಾ?
ಮೊಮ್ಮಗ: ಕಿಲಾಡಿ ಇದೀಯಾ ತಾತಾ ನೀನು. ನನಗ್ಯಾಕೋ ಮದುವೆ ಆಂತೀಯಾ ಅಂತಿದ್ರೆ, ನನಗೆ ಹೆಣ್ಣು ಯಾರ್ ಕೊಡ್ತಾರೆ ಅಂತ ಕೇಳ್ತಿಯಲ್ಲ. ಇನ್ನೆಷ್ಟು ಆಸೆ ಇದೆ ನಿನಗೆ.

ಇಬ್ಬರು ಡಾಕ್ಟರ್‌ಗಳು ಆಪರೇಷನ್ ಟೇಬಲ್ ಮೇಲೆ ಮಲಗಿದ್ದ ರೋಗಿಯನ್ನು ನೋಡಿ ಹೀಗಂದರು...
ಒಬ್ಬ: ಕೆಲವೊಮ್ಮೆ ನಾವು ಯೋಚನೇನೇ ಮಾಡಿರಲ್ಲ. ಯಾವಾಗ ಯಾರನ್ನು ಎಲ್ಲಿ ಭೇಟಿ ಆಗುತ್ತೇವೆಂದು.
ಇನ್ನೊಬ್ಬ: ಈತ ಯಾರೆಂದು ನಿನಗೆ ನೆನಪುಂಟಾ?
ಒಬ್ಬ: ಹೌದು. ಈತ ಅದೇ ಬ್ಯಾಂಕ್ ಮ್ಯಾನೇಜರ್! ನಮ್ಮ ಎಜುಕೇಷನ್ ಲೋನನ್ನು ರಿಜೆಕ್ಟ್ ಮಾಡಿದ್ದನಲ್ಲ ಅವನೇ.

ಹೆಂಡತಿ: (ಸಿಟ್ಟಿನಿಂದ) ನಿಮ್ಮನ್ನು ಮದುವೆಯಾಗೋ ಬದಲು ಒಬ್ಬ ರಾಕ್ಷಸನನ್ನು ಮದುವೆಯಾಗಿದ್ದರೆ ಎಷ್ಟೋ ಸುಖವಾಗಿರುತ್ತಿದ್ದೆ.
ಗಂಡ: ಹಾಗೆಲ್ಲಾ ರಕ್ತ ಸಂಬಂಧದಲ್ಲಿ ಮದುವೆ ಆಗ್ಬಾರ್ದು ಕಣೇ. ಒಳ್ಳೇದಲ್ಲ.

ರೋಡಿನ ಪಕ್ಕದಲ್ಲೇ ಕುಡುಕನೊಬ್ಬ ಏನನ್ನೋ ಹುಡುಕುತ್ತಿದ್ದ. ಅದನ್ನು ನೋಡಿದ ಮತ್ತೊಬ್ಬ ಕುಡುಕ ಅಲ್ಲಿಗೆ ಬಂದು ಅವನೂ ಏನನ್ನೋ ಹುಡುಕಲಾರಂಭಿಸಿದ. ಇಬ್ಬರು ಹುಡುಕುತ್ತಿದ್ದುದನ್ನು ನೋಡಿ ಮೂರನೇ ಕುಡುಕನೂ ಹುಡುಕಲಾರಂಭಿಸಿದ. 'ಏನನ್ನು ಹುಡುಕುತ್ತಿದ್ದೀರಿ' ಎಂದು ಸ್ವಲ್ಪ ಹೊತ್ತಿನ ನಂತರ ಎರಡನೇ ಮತ್ತು ಮೂರನೇ ಕುಡುಕರು, ಮೊದಲನೇ ಕುಡುಕನನ್ನು ಕೇಳಿದರು. ಅದಕ್ಕೆ ಅವನು, 'ಕಳೆದುಹೋದ ನನ್ನ ಕನಸುಗಳನ್ನು ಹುಡುಕುತ್ತಿದ್ದೇನೆ' ಎಂದ!

ಗುರು: ವಿದೇಶಕ್ಕೆ ಹೋದ ಪ್ರಥಮ ಮಹಿಳೆ ಯಾರು?
ಶಿಷ್ಯ: ಸೀತೆ ಸರ್, ಶ್ರೀಲಂಕಾಕ್ಕೆ ಹೋಗಿದ್ದರು.

ಹೆಂಡತಿ: ರೀ, ಈ ಮನೇಲಿ ಒಂದೋ ನಾನು ಇರ್ಬೇಕು. ಇಲ್ಲ ನಿಮ್ಮ ಅಮ್ಮ ಇರ್ಬೇಕು.
ಗಂಡ: ಇಬ್ರೂ ಬೇಕಾಗಿಲ್ಲ. ಕೆಲಸದವಳು ಒಬ್ಬಳಿದ್ರೆ ಸಾಕು.

ಸಂಗ್ರಹ: ಎನ್. ಕೃಷ್ಣಮೂರ್ತಿ ರಾವ್, ಬೆಂಗಳೂರು







